ಶ್ರೀ ಎಚ್. ಸಿದ್ದವೀರಪ್ಪ.—ನಾನು ಇಲ್ಲಿಯವರೆಗೂ ಯಾವ ಕಾರ್ಯಕ್ರಮಗಳನ್ನೂ ಕೈಗೊಂಡಿಲ್ಲ. ಆ ವಿಷಯಗಳೂ ನಮ ನನ್ನಲ್ಲಿ ಸದ್ಯಕ್ಕೆ ಇರುವುದಿಲ್ಲ. ಆದರೂ ನಾನು ತಾವು ಹೇಳಿರತಕ್ಕ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ. ಅಂಥಾದ್ದೇನಾದರೂ ನಡೆದಿದ್ದರೆ ನಮ್ಮ ಹಣದ ವಸೂಲಿಗೆ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈ ಕಾರ್ಖಾನೆಗಳಿಗೂ ಸರ್ಕಾರದವರು ಎಷ್ಟು ಸಾಲ ಕೊಟ್ಟಿದ್ದೀರಿ ?

Sri H. SIDDAVEERAPPA.—I am sorry. I want notice.

Sri K. V. BYRE GOWDA.—Who is the proprietor of the Karnataka Silk and Filatures, Ltd. ?

Sri H. SIDDAVEERAPPA.—I will furnish the information to the Hon'ble Member. I have not got that information just now.

Mr. SPEAKER.—And also the amount of loan granted to each of these factories.

Sri H. SIDDAVEERAPPA.—I will place it in the hands of the Hon'ble Members.

Multi-purpose Co-operative Societies in Arsikere Taluk.

Q.—92. Sri B. CHIKKANNA (Javagal).—

Will the Government be pleased to state :—

(*a*) the places and the number of Multi-purpose Co-operative Societies and the places where they are located in Arsikere Taluk ;

(*b*) whether all the said societies are functioning ;

(*c*) whether the shareholders of any such society have requested for the refund of their share amount ?

A—Dr. R. NAGAN GOWDA (Minister for Agriculture).—

(*a*) Number of Multi-purpose Societies in Arasikere Taluk.—11 (Eleven).

(*b*) Places of Multi-purpose Co-operative Societies.—

1. Arsikere Taluk
2. Banavara Circle
3. Bendekere Circle
4. Dumenahalli Circle
5. Harnahalli Circle
6. Gandasi Circle
7. Bageshapur Circle
8. Karagunda Circle
9. Sankihalli Circle
10. Kanakatte Circle
11. Doddametikurke Circle

Eight of them are functioning.

(*c*) Yes. In two societies, *viz.*, Gandasi Multi-purpose Co-operative Society and Harnahalli Multi-purpose Co-operative Society, applications for refund of share had been received.

ಶ್ರೀ ಬಿ. ಚಿಕ್ಕಣ್ಣ.—ಉತ್ತರದಲ್ಲಿ 11ರಲ್ಲಿ 8 ಸೊಸೈಟಿಗಳು ಮಾತ್ರ ಕೆಲಸ ಮಾಡುತ್ತಿವೆ ಎಂದು ತಿಳಿಸಿದ್ದೀರಿ. ಆ ಉಳಿದ ಕೆಲಸ ಮಾಡದೆ ಇರುವ 3 ಸೊಸೈಟಿಗಳ ಹೆಸರನ್ನು ತಿಳಿಸುವುದಕ್ಕಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ಬೇದರಹಳ್ಳಿ, ಸೊಸೈಟಿ, ಗಂಡಸಿ ಸೊಸೈಟಿ ಮತ್ತು ಹಾರನಹಳ್ಳಿ ಸೊಸೈಟಿ.

ಶ್ರೀ ಬಿ. ಚಿಕ್ಕಣ್ಣ.—ಈ ಸೊಸೈಟಿಗಳ ಷೇರುದಾರರು ಹಣ ವಾಪಸ್ಸು ಕೊಡಬೇಕೆಂದು ಕೇಳಿ ಎಷ್ಟು ದಿವಸಗಳಾಯಿತು ?

ಡಾ॥ ಆರ್. ನಾಗನಗೌಡ.—ಆ ವಿಚಾರ ಈಗ ಸದ್ಯಕ್ಕೆ ನನ್ನಲ್ಲಿಲ್ಲ. ಆದರೆ ಆ ಗಂಡಸಿ ಸೊಸೈಟಿ ಈಗ ಚೆನ್ನಾಗಿ ಕೆಲಸ ಮಾಡುತ್ತಿದೆ. ಅದನ್ನು ರಿಆರ್ಗನೈಜ್ ಮಾಡಿದ್ದೇವೆ. ಆದರೆ ಈಗ ಷೇರು ಮೊಬಲಗುಗಳನ್ನು ವಾಪಸ್ಸು ಕೊಡತಕ್ಕಂಥ ಪ್ರಶ್ನೆ ಹಾಗನಹಳ್ಳಿ ಒಂದರ ವಿಷಯದಲ್ಲಿ ಮಾತ್ರ ಬಂದಿದೆ. ಅದಕ್ಕೆ ಸೂಕ್ತ ಏರ್ಪಾಡು ಮಾಡಿದ್ದೇವೆ.

ಶ್ರೀ ಬಿ. ಚಿಕ್ಕಣ್ಣ.—ಆ ಷೇರುದಾರರಿಗೆಲ್ಲ ಈಗ ಪೂರ್ತಿಯಾಗಿ ಷೇರು ಮೊಬಲಗನ್ನು ವಾಪಸ್ಸು ಕೊಡುತ್ತೀರಲ್ಲವೇ ?

ಡಾ॥ ಆರ್. ನಾಗನಗೌಡ.—ಎಷ್ಟು ಹಣ ಉಳಿದಿದೆಯೋ ಅಷ್ಟನ್ನು ದಾಮಾಷಾ ಪ್ರಕಾರ ಹಂಚಲಾಗುತ್ತದೆ.

ಶ್ರೀ ಬಿ. ಚಿಕ್ಕಣ್ಣ.—ಹಣ ಆ ರೀತಿ ಕಡಮೆಯಾಗಲು ಕಾರಣವೇನು ?

ಡಾ॥ ಆರ್. ನಾಗನಗೌಡ.—ನಂಬಳ ಸಾರಿಗೆ ಇತ್ಯಾದಿಗಳಿಗೆಲ್ಲಾ ಕೊಂಚ ಭಾಗ ಖರ್ಚಾಗಿದೆ. ಅದರಿಂದ ಕಡಮೆ ಬೀಳುತ್ತದೆ.

ಶ್ರೀ ಬಿ. ಚಿಕ್ಕಣ್ಣ.—ಆ ರೀತಿ ಹಣ ಪೋಲಾಗುತ್ತಿದೆಯೆಂಬುದು ತಿಳಿದು ಬಂದಾಗ್ಯೂ ಎರಡು ವರ್ಷಗಳಿಂದ ಆ ಷೇರ್ ಮೊಬಲಗನ್ನು ವಾಪಸ್ಸು ಕೊಡದಿರಲು ಕಾರಣವೇನು ?

ಡಾ॥ ಆರ್. ನಾಗನಗೌಡ.—ಒಂದಾವರ್ತಿ ಸೊಸೈಟಿಗಳನ್ನು ಪ್ರಾರಂಭ ಮಾಡಿದ ಮೇಲೆ ಸಾಮಾನ್ಯವಾಗಿ ಅವುಗಳನ್ನು ಮುಂದುವರಿಸಿಕೊಂಡು ಹೋಗಬೇಕು. ಅವುಗಳನ್ನು ಎಂದಿಗೂ ನಿರ್ನಾಮ ಮಾಡಬಾರದು. ಸಾಧ್ಯವಾದಷ್ಟು ಇವು ಚೆನ್ನಾಗಿ ಕೆಲಸ ಮಾಡುವಂತೆ ಮಾಡಲು ತರದೂದು ಮಾಡಿದೆವು. ಈಗಾಗಲೆ ಆ ಗಂಡಸಿ ಸೊಸೈಟಿ ದಾರಿಗೆ ಬಂದಿದೆ. ಆದರೆ ಈಗ ಹಾರನಹಳ್ಳಿಯವರು ಮಾತ್ರ ಷೇರು ಮೊಬಲಗುಗಳನ್ನು ಕೇಳುತ್ತಿದ್ದಾರೆ.

ಶ್ರೀ ಬಿ. ಚಿಕ್ಕಣ್ಣ.—ಅಲ್ಪಕಾಲಾವಧಿಯ ಸಾಲವನ್ನು ಆ ಎರಡು ಹಳ್ಳಿಗಳಿಗೆ ಮಾತ್ರ ಕೊಡಲಾಗುತ್ತದೆ—ಉಳಿದ ಹಳ್ಳಿಗಳವರು ಅವರೇ ಪ್ರತ್ಯೇಕ ಸೊಸೈಟಿಗಳನ್ನು ಮಾಡಿಕೊಳ್ಳಬೇಕೆಂದು ಹೇಳುತ್ತಿರುವ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ನಮಿಾಪದ ಹಳ್ಳಿಗಳಿಗಾದರೆ ಕೊಡಬಹುದು. ದೂರದಲ್ಲಿರತಕ್ಕ ಹಳ್ಳಿಗಳಿಗೆ ಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಬಿ. ಚಿಕ್ಕಣ್ಣ.—ಹೋಗಲಿ. ಈಗ ಅವರ ಷೇರ್ ಮೊಬಲಗನ್ನಾದರೂ ಏಕೆ ವಾಪಸ್ ಕೊಡಬಾರದು?

ಡಾ॥ ಆರ್. ನಾಗನಗೌಡ.—ಅದರೂ ನಾನು ಮತ್ತೊಮ್ಮೆ ಈ ವಿಷಯವನ್ನು ವಿಚಾರ ಮಾಡುತ್ತೇನೆ. ಒಂದಾವರ್ತಿ ನಡನ್ಯರಾದ ಮೇಲೆ ಅವರಿಗೆ ಸಾಲ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅದೇನು ಕಾರಣದಿಂದ ಹಾಗೆ ಹೇಳಿದ್ದಾರೋ ವಿಚಾರ ಮಾಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಯಾವ ಸೊಸೈಟಿಯ ಷೇರುದಾರರಾಗಲಿ ಹಾಗೆ ನಮಗೆ ಹಣ ವಾಪಸ್ ಕೊಡಬೇಕೆಂದು ಕೇಳಿದರೆ ಹಣ ವಾಪಸ್ಸು ಕೊಡುತ್ತೀರಾ?

ಡಾ॥ ಆರ್. ನಾಗನಗೌಡ.—ಆ ಪಂಚಾಯಿತಿಯವರಿಗೆ ಆ ಅಧಿಕಾರವಿದೆ. ಸರ್ಕಾರಕ್ಕೇನೂ ಆ ಬಗ್ಗೆ ಅಧಿಕಾರವಿಲ್ಲ.

ಶ್ರೀ ಕೆ. ಲಕ್ಕಪ್ಪ.—ಹಾಗೆ ಹಣವನ್ನು ವಾಪಸ್ಸು ಕೊಡುವುದಕ್ಕೆ ಬದಲಾಗಿ ಯಾವ ಯಾವ ಸೊಸೈಟಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೋ ಅಂಥ ಸೊಸೈಟಿಗಳಾದರೂ ಆ ಮೊಬಲಗನ್ನು ಕೊಡುವುದು ಸೂಕ್ತವಲ್ಲವೇ?

ಡಾ॥ ಆರ್. ನಾಗನಗೌಡ.—ಈಗಾಗಲೇ ಈ ಎರಡು ಸೊಸೈಟಿಗಳಲ್ಲ ಒಂದು ಮತ್ತೆ ಕೆಲಸ ಷುರುವಾಗಿದೆ. ಆದರೆ ತಾವು ಹೇಳಿದಅಂಶವನ್ನು ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಈ ಮೂರು ಸೊಸೈಟಿಗಳು ಚೆನ್ನಾಗಿ ನಡೆಯುತ್ತಾ ಇಲ್ಲ ಎಂದು ಹೇಳಿದ್ದೀರಿ. ಇದಕ್ಕೆ ಏನು ಕಾಯಿಲೆ ಎಂಬುದನ್ನು ಕಂಡು ಹಿಡಿದಿದ್ದೀರಾ?

ಅಧ್ಯಕ್ಷರು.—ಜನಗಳ ಕಾಯಿಲೆಯೇ ಇದಕ್ಕೂ ಕಾಯಿಲೆ.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಇಲ್ಲಿರತಕ್ಕ ಅಧಿಕಾರಿಗಳು ಖಾಸಗೀ ಜನರಿಗೆ ದುಡ್ಡು ಸಾಕಾದಷ್ಟು ಕೊಡದೆ ಇರುವುದು ಕಾರಣವಲ್ಲವೇ?

ಶ್ರೀ ಎಚ್. ಸಿದ್ಧವೀರಪ್ಪ.—Short term loanನ್ನು ಬೇಕಾದಷ್ಟು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಪಂಚಾಯತಿದಾರರು ಶ್ರದ್ಧೆ ತೆಗೆದುಕೊಂಡು ಕೆಲಸಮಾಡಿದರೆ ಚೆನ್ನಾಗಿರುತ್ತದೆ.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಎಂಟು ಸೊಸೈಟಿಗಳಿಗೆ ಅಲ್ಪಾವಧಿ ಸಾಲ ಕೊಟ್ಟಿದ್ದಾರೆಯೇ?

ಶ್ರೀ ಎಚ್. ಸಿದ್ಧವೀರಪ್ಪ.—ಆ information ನದ್ಯಕ್ಕೆ ನನ್ನ ಹತ್ತಿರವಿಲ್ಲ.

ಶ್ರೀ ಎಸ್. ಸಿದ್ಧಪ್ಪ.—Multi-purpose Societyಗಳನ್ನು ಸ್ಥಾಪನೆ ಮಾಡಿದಾಗ ಸರ್ಕಾರದ ಅಭಿಪ್ರಾಯದಮೇಲೆ ತಾನೆ ಮಾಡಿದ್ದು! ಹಣದ ಮೇಲ್ವಿಚಾರಣೆಗೆ ಸರ್ಕಾರ ನಿಗಾ ಕೊಟ್ಟಿಲ್ಲವೆ?

ಡಾ॥ ಆರ್. ನಾಗನಗೌಡ.—ಸರ್ಕಾರದ ನಿಗಾ ಇದೆ. ಆದರೆ ಇವೆಲ್ಲಾ more or less autonomous bodies. ಷೇರುದಾರರು, ಪಂಚಾಯಿತಿದಾರರು, Board of Directors ಅವರಿಗೆ ಸರಿಯಾಗಿ ಕೆಲಸಕ್ಕೆ ದುಡ್ಡು ಉಪಯೋಗ ಮಾಡುವುದಕ್ಕೆ ಅಧಿಕಾರ ಉಂಟು.

ಶ್ರೀ ಎಸ್. ಸಿದ್ಧಪ್ಪ.—ಸೊಸೈಟಿಗಳನ್ನು ಸ್ಥಾಪನೆ ಮಾಡಿದಮೇಲೆ ಅವುಗಳ ಮೇಲೆ ಸರ್ಕಾರಕ್ಕೆ hold ಇಲ್ಲವೇ?

ಡಾ॥ ಆರ್. ನಾಗನಗೌಡ.—ದುಡ್ಡು ದುರುಪಯೋಗಮಾಡಿದರೆ ಆಗ ಸರ್ಕಾರದವರು ಕೈಹಾಕಬೇಕಾಗುತ್ತದೆ. ಸರಿಯಾದ ಕೆಲಸಕ್ಕೆ ದುಡ್ಡು ಖರ್ಚು ಮಾಡಿದರೆ ಆಗ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸಿದ್ಧಪ್ಪ.—ಎಲ್ಲೆಲ್ಲ ಸೊಸೈಟಿಗಳು ಹಣವಿಲ್ಲದೆ ಹೀನಸ್ಥಿತಿಗೆ ಬಂದಿವೆಯೋ, ಅಲ್ಲ ಹಣವನ್ನು recover ಮಾಡಿಸಿ ಸಂಸ್ಥೆಗಳನ್ನು ಉದ್ಧಾರಮಾಡಿದ್ದಾರೆಯೇ?

ಡಾ॥ ಆರ್. ನಾಗನಗೌಡ.—ಎಲ್ಲೆಲ್ಲಿ ಹಣ ದುರುಪಯೋಗವಾಗಿದೆಯೋ ಅಲ್ಲ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸಿದ್ಧಪ್ಪ.—Multi-purpose ಸೊಸೈಟಿ ಆಡಳಿತ ಸರಿಯಾಗಿಲ್ಲ, ಅಧಿಕಾರಿ ತೆಗೆಯಿಸಿ ಬೇಕು ಎಂಬ ದೂರು ಇದುವರೆಗೂ ಎಲ್ಲಿಂದಲೂ ಬಂದಿಲ್ಲವೇ?

ಡಾ॥ ಆರ್. ನಾಗನಗೌಡ.—ಎಲ್ಲಾ Circle Multi-purpose Societyಗಳೂ ಸರಿಯಾಗಿವೆ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲೆಲ್ಲ ಸರಿಯಾಗಿಲ್ಲವೋ ಅಲ್ಲೆಲ್ಲಾ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸಿದ್ಧಪ್ಪ.—Audit ಮಾಡಿಸೋಣವಾಗಿದೆಯೇ?

ಡಾ॥ ಆರ್. ನಾಗನಗೌಡ.—ಹೌದು.

Multi-purpose Co-operative Societies in Bangalore District.

Q.—409. **Sri K. V. BYRE GOWDA** (Bangalore North).—

Will the Government be pleased to state :—

(*a*) the total number of Multi-purpose Co-operative Societies in the State ;

(*b*) the number of Multi-purpose Co-operative Societies that are functioning in Bangalore district ;

(*c*) the total number of Societies that are audited till the end of June 1955 ;

(*d*) the irregularities and misappropriations noticed in respect of Multi-purpose Co-operative Societies and other Co-operative Societies in Devanahalli and Bangalore North Taluks and the action taken in this behalf ?

A.—**Dr. R. NAGAN GOWDA** (Minister for Agriculture).—

(*a*) 822.